# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2234 (236)
2. ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 26/03/2026
4. ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | 16ನೇ ಹಣಕಾಸು ಆಯೋಗದಲ್ಲಿ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಹಂಚಿಕೆ ಆಗಬೇಕಾಗಿದ್ದ ತೆರಿಗೆ ಹಣದಲ್ಲಿ ಕಡಿಮೆಯಾಗಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗಬೇಕಾಗಿದ್ದ ಹಂಚಿಕೆಯಲ್ಲಿ ಕಡಿಮೆಯಾಗಿರುವ ಹಣದ ವಿವರಗಳನ್ನು ಒದಗಿಸುವುದು; | **14ನೇ** ಹಣಕಾಸು ಆಯೋಗದ ಅವಧಿಯಲ್ಲಿದ್ದ ಕರ್ನಾಟಕದ ತೆರಿಗೆ ಪಾಲು **4.713%** ರಿಂದ **15ನೇ** ಹಣಕಾಸು ಆಯೋಗದ ಅವಧಿಯಲ್ಲಿ **3.647%** ಕ್ಕೆ ಅಂದರೆ **ಶೇ.23ರಷ್ಟು** ಇಳಿಕೆಯಾಗಿತ್ತು. **16ನೇ** ಹಣಕಾಸು ಆಯೋಗವು ಮುಂದಿನ ಐದು ವರ್ಷಗಳ ಅವಧಿಗೆ (2026-27 ರಿಂದ 2030-31 ರವರೆಗೆ) ರಾಜ್ಯದ ತೆರಿಗೆ ಪಾಲನ್ನು **4.131%** ಕ್ಕೆ ಶಿಫಾರಸ್ಸು ಮಾಡಿದೆ. **15ನೇ** ಹಣಕಾಸು ಆಯೋಗದ ಶಿಫಾರಸ್ಸಿಗೆ ಹೋಲಿಸಿದರೆ **16ನೇ** ಹಣಕಾಸು ಆಯೋಗದ ಅವಧಿಯಲ್ಲಿ ರಾಜ್ಯದ ತೆರಿಗೆ ಪಾಲು **ಶೇ.13** ರಷ್ಟು ಹೆಚ್ಚಳವಾಗಿರುತ್ತದೆ ಮತ್ತು 15ನೇ ಹಣಕಾಸು ಆಯೋಗದ ಶಿಫಾರಸ್ಸಿನಿಂದ ತೆರಿಗೆ ಹಂಚಿಕೆಯಲ್ಲಿ ಅನ್ಯಾಯವಾಗಿದ್ದು ಭಾಗಶಃ ಪರಿಗಣಿಸಿದಂತಾಗಿದೆ. |
| ಆ) | 16ನೇ ಹಣಕಾಸು ಆಯೋಗದಲ್ಲಿ, ರಾಜ್ಯಕ್ಕೆ ತೆರಿಗೆ ಹಣ ಹಂಚಿಕೆಯಲ್ಲಿ ಎಷ್ಟು ಮೊತ್ತದ ಹಣದ ನಷ್ಟ ಉಂಟಾಗಿರುತ್ತದೆ; ಇದನ್ನು ಸರಿಪಡಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಗಮನ ಸೆಳೆದಿದೆಯೇ; | |
| ಇ) | 15ನೇ ಹಣಕಾಸು ಆಯೋಗದಲ್ಲಿ ರಾಜ್ಯ ತೆರಿಗೆ ಹಂಚಿಕೆಯಲ್ಲಿ ಕುಂಠಿತವಾದ ಶೇಕಡವಾರು ಪ್ರಮಾಣವೆಷ್ಟು, ಮತ್ತು ಇದರಿಂದ ಅಂದಾಜು ಎಷ್ಟು ಮೊತ್ತ ರಾಜ್ಯಕ್ಕೆ ಕೊರತೆಯಾಗಿರುತ್ತದೆ; | ಕರ್ನಾಟಕದ ತೆರಿಗೆ ಹಂಚಿಕೆಯು **14ನೇ** ಆಯೋಗದಲ್ಲಿದ್ದ **ಶೇ. 4.713** ರಿಂದ **15ನೇ** ಹಣಕಾಸು ಆಯೋಗದಲ್ಲಿ **ಶೇ. 3.647ಕ್ಕೆ** ಇಳಿಕೆಯಾಗಿದೆ (ಸುಮಾರು **ಶೇ.23ರಷ್ಟು** ಕುಸಿತ). ಇದರಿಂದಾಗಿ ರಾಜ್ಯಕ್ಕೆ **15ನೇ ಹಣಕಾಸು ಆಯೋಗದ 6 ವರ್ಷಗಳ ಅವಧಿಯಲ್ಲಿ** (2020-21 ರಿಂದ 2025-26 ರವರೆಗೆ) ಸುಮಾರು **65,000 ಕೋಟಿ ರೂ.ಗಳಷ್ಟು** ತೆರಿಗೆ ನಷ್ಟವಾಗಿರುತ್ತದೆ. |
| ಈ) | ಒಕ್ಕೂಟ ವ್ಯವಸ್ಥೆಯಲ್ಲಿ ನ್ಯಾಯಯುತವಾಗಿ ರಾಜ್ಯಗಳಿಗೆ ಹಂಚಿಕೆಯಾಗಬೇಕಾದ ತೆರಿಗೆ ಹಣ ಹಂಚಿಕೆ ಆಗದೆ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುತ್ತಿದ್ದು, ರಾಜ್ಯ ಸರ್ಕಾರ ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದೆಯೇ; ತಂದಿದ್ದಲ್ಲಿ, ಕೇಂದ್ರ ಸರ್ಕಾರದಿಂದ ಯಾವ ರೀತಿಯ ಆಶ್ವಾಸನೆ/ಉತ್ತರ ದೊರೆತಿದೆ: | ತೆರಿಗೆ ಸಂಪನ್ಮೂಲಗಳ ಹಂಚಿಕೆಯಲ್ಲಿ ಹಿಂದಿನ ಆಯೋಗಗಳು ಅನುಸರಿಸಿದ ಮಾನದಂಡಗಳಲ್ಲಿನ ಲೋಪಗಳನ್ನು ಸರಿಪಡಿಸಿ ರಾಜ್ಯಕ್ಕೆ ಉಂಟಾಗಿರುವ ರಾಜಸ್ವ ನಷ್ಟವನ್ನು ಪರಿಹರಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು 16ನೇ ಹಣಕಾಸು ಆಯೋಗಕ್ಕೆ ಜ್ಞಾಪನ ಪತ್ರ ಮತ್ತು ಹೆಚ್ಚುವರಿ ಜ್ಞಾಪನ ಪತ್ರವನ್ನು ಸಲ್ಲಿಸಿರುತ್ತದೆ ಹಾಗೂ ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿರುತ್ತದೆ.<br><br>ರಾಜ್ಯ ಸರ್ಕಾರ ಸಲ್ಲಿಸಿದ ಜ್ಞಾಪನಾ ಪತ್ರದ ಸಾರಾಂಶ ಕೆಳಕಂಡಂತಿದೆ: |

| | | |
|---|---|---|
| | | • ರಾಜ್ಯಗಳ ನಡುವಿನ ತೆರಿಗೆ ಹಂಚಿಕೆಯನ್ನು ಕನಿಷ್ಠ 50% ಕ್ಕೆ ಹೆಚ್ಚಿಸುವುದು ಹಾಗೂ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು 5% ಕ್ಕೆ ಮಿತಿಗೊಳಿಸುವುದು.<br>• ಕೇಂದ್ರದ ತೆರಿಗೆಯೇತರ ಆದಾಯವನ್ನೂ ರಾಜ್ಯಗಳಿಗೆ ಹಂಚಿಕೆಯಾಗುವ ಪಾಲಿನಲ್ಲಿ ಸೇರಿಸಬೇಕು.<br>• ರಾಜ್ಯಗಳ ನಡುವಿನ ಹಂಚಿಕೆಯಲ್ಲಿ ಪ್ರತಿ ರಾಜ್ಯವು ತನ್ನ ಕೊಡುಗೆಯ ಸುಮಾರು 60% ಅನ್ನು ಉಳಿಸಿಕೊಂಡು, ಉಳಿದ 40% ಅನ್ನು ಇತರ ರಾಜ್ಯಗಳಿಗೆ ಹಂಚಿಕೆ ಮಾಡಬೇಕು.<br>• ಸಮಾನತೆ ಮತ್ತು ಬೆಳವಣಿಗೆ ಎರಡಕ್ಕೂ ಮಹತ್ವ ನೀಡುವ ದೃಷ್ಟಿಯಿಂದ ಆದಾಯ ಅಂತರದ ತೂಕವನ್ನು 25% ಕ್ಕೆ ಇಳಿಸಿ, ದೇಶದ ಜಿ.ಡಿ.ಪಿ.ಯಲ್ಲಿನ ರಾಜ್ಯದ ಪಾಲಿಗೆ 20% ತೂಕ ನೀಡಬೇಕು.<br>• ರಾಜಸ್ವ ಕೊರತೆ ಅನುದಾನಗಳು ಪ್ರತ್ಯೇಕವಾಗಿ ನೀಡುವ ಬದಲು ತೆರಿಗೆ ಹಂಚಿಕೆಯ ಸೂತ್ರದಲ್ಲೇ ಎಲ್ಲಾ ರಾಜ್ಯಗಳಿಗೂ ನೀಡಬೇಕು<br><br>ಎಂದು ರಾಜ್ಯ ಸರ್ಕಾರ 16ನೇ ಹಣಕಾಸು ಆಯೋಗಕ್ಕೆ ಪ್ರಸ್ತಾಪಿಸಿತ್ತು.<br>ರಾಜ್ಯ ಸರ್ಕಾರ ಸಲ್ಲಿಸಿದ ಎಲ್ಲಾ ಪ್ರಸ್ತಾವನೆಗಳನ್ನು 16ನೇ ಹಣಕಾಸು ಆಯೋಗ ಒಪ್ಪಿರುವುದಿಲ್ಲ. ರಾಜ್ಯಗಳ ಆರ್ಥಿಕ ಕಾರ್ಯಕ್ಷಮತೆ ಮತ್ತು ಬೆಳವಣಿಗೆಯ ಸಾಮರ್ಥ್ಯವನ್ನು ಗುರುತಿಸುವ ಉದ್ದೇಶದಿಂದ, ದೇಶದ ಜಿ.ಡಿ.ಪಿ. ಗೆ ರಾಜ್ಯದ ಕೊಡುಗೆಯನ್ನು ಮಾನದಂಡವಾಗಿ ಪರಿಗಣಿಸಿದ್ದು, ಶೇ.10% ತೂಕ ನೀಡಿರುತ್ತದೆ. ರಾಜಸ್ವ ಕೊರತೆ ಅನುದಾನಗಳನ್ನು ಕೈಬಿಡಲಾಗಿದೆ. ಆದರೆ ಈ ಅನುದಾನಗಳನ್ನು ರಾಜ್ಯಗಳಿಗೆ ಹಂಚಿಕೆ ಮಾಡದಿರುವುದರಿಂದ ಈ ಅನುದಾನವು ಕೇಂದ್ರ ಸರ್ಕಾರದ ಬಳಿಯೇ ಉಳಿಯಲಿದೆ. |
| ಉ) | ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ತೆರಿಗೆ ಹಂಚಿಕೆಯಲ್ಲಿ ಕುಂಠಿತವಾಗಿರುವ ಶೇಕಡವಾರು ಪ್ರಮಾಣ ಮತ್ತು ಹಣದ ಪ್ರಮಾಣ ಎಷ್ಟು? (ವಿವರಗಳನ್ನು ಒದಗಿಸುವುದು) | ಕಳೆದ 3 ವರ್ಷಗಳಲ್ಲಿ (2022-23 ರಿಂದ 2024-25 ರವರೆಗೆ) 15ನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದ್ದ 3.647% ರಂತೆ ತೆರಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ವರ್ಷಗಳಲ್ಲಿ 14ನೇ ಹಣಕಾಸು ಆಯೋಗದ ಶಿಫಾರಸ್ಸು 4.713% ರಂತೆ ತೆರಿಗೆ ಹಂಚಿಕೆ ಮಾಡಿದ್ದರೆ ರಾಜ್ಯಕ್ಕೆ 35,760 ಕೋಟಿ ರೂ.ಗಳ ತೆರಿಗೆ ಹಂಚಿಕೆ ಹೆಚ್ಚುವರಿಯಾಗಿ ಸ್ವೀಕೃತವಾಗಬೇಕಿತ್ತು. 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ತೆರಿಗೆ ಹಂಚಿಕೆಯಾಗಿರುವುದರಿಂದ ರಾಜ್ಯಕ್ಕೆ ಶೇ.23% ರಷ್ಟು ತೆರಿಗೆ ನಷ್ಟವಾಗಿರುತ್ತದೆ. |

**ಸಂಖ್ಯೆ: ಆಇ 11 ಎಫ್‌ಸಿಸಿ 2026**

(ಸಿದ್ದರಾಮಯ್ಯ)
ಮುಖ್ಯ ಮಂತ್ರಿ

**ಪೂರಕ ಟಿಪ್ಪಣಿ**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2234 (236)ನ ಉತ್ತರಕ್ಕೆ ಪೂರಕ ಟಿಪ್ಪಣಿ**

16ನೇ ಹಣಕಾಸು ಆಯೋಗದ ಅವಧಿಯು 1ನೇ ಏಪ್ರಿಲ್, 2026 ರಿಂದ 31ನೇ ಮಾರ್ಚ್, 2031 ರವರೆಗೆ ಇರುತ್ತದೆ. ಅದರಂತೆ ರಾಜ್ಯ ಸರ್ಕಾರವು ತೆರಿಗೆ ಸಂಪನ್ಮೂಲಗಳ ಹಂಚಿಕೆಯಲ್ಲಿ ಹಿಂದಿನ ಆಯೋಗಗಳು ಅನುಸರಿಸಿದ ಮಾನದಂಡಗಳಲ್ಲಿನ ಲೋಪಗಳನ್ನು ಸರಿಪಡಿಸಿ ರಾಜ್ಯಕ್ಕೆ ಉಂಟಾಗಿರುವ ರಾಜಸ್ವ ನಷ್ಟವನ್ನು ಪರಿಹರಿಸುವ ಉದ್ದೇಶದಿಂದ 16ನೇ ಹಣಕಾಸು ಆಯೋಗಕ್ಕೆ ಜ್ಞಾಪನಾ ಪತ್ರವನ್ನು ಸಲ್ಲಿಸಿರುತ್ತದೆ ಹಾಗೂ ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ 16ನೇ ಹಣಕಾಸು ಆಯೋಗವು 2026-27 ರಿಂದ 2030-31ರ ಅವಧಿಗೆ ರಾಜ್ಯಕ್ಕೆ ತೆರಿಗೆ ಪಾಲನ್ನು 4.131% ಗೆ ಶಿಫಾರಸ್ಸು ಮಾಡಿರುತ್ತದೆ. ಇದು 15ನೇ ಹಣಕಾಸು ಆಯೋಗದ ಶಿಫಾರಸ್ಸಿಗೆ ಹೋಲಿಸಿದರೆ ಶೇ.13 ರಷ್ಟು ಹೆಚ್ಚಳವಾಗಿರುತ್ತದೆ. ಆದರೆ 14ನೇ ಹಣಕಾಸು ಆಯೋಗದ ಶಿಫಾರಸ್ಸಿಗೆ ಹೋಲಿಸಿದರೆ ತೆರಿಗೆ ಪಾಲು ಕಡಿಮೆಯಾಗಿದ್ದು, ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ಅನ್ಯಾಯವಾಗಿರುವುದು ಕಂಡುಬರುತ್ತದೆ.

ರಾಜ್ಯ ಸರ್ಕಾರ ಸಲ್ಲಿಸಿದ ಎಲ್ಲಾ ಪ್ರಸ್ತಾವನೆಗಳನ್ನು 16ನೇ ಹಣಕಾಸು ಆಯೋಗ ಒಪ್ಪಿರುವುದಿಲ್ಲ. ರಾಜ್ಯಗಳ ಆರ್ಥಿಕ ಕಾರ್ಯಕ್ಷಮತೆ ಮತ್ತು ಬೆಳವಣಿಗೆಯ ಸಾಮರ್ಥ್ಯವನ್ನು ಗುರುತಿಸುವ ಉದ್ದೇಶದಿಂದ ದೇಶದ ಜಿ.ಡಿ.ಪಿ.ಗೆ ರಾಜ್ಯದ ಕೊಡುಗೆಯನ್ನು ಮಾನದಂಡವಾಗಿ ಪರಿಗಣಿಸಿದ್ದು, ಶೇ.10% ರಷ್ಟು ತೂಕ ನೀಡಿರುತ್ತದೆ. ಮುಂದುವರೆದು ರಾಜಸ್ವ ಕೊರತೆ ಅನುದಾನಗಳನ್ನು ಕೈಬಿಡಲಾಗಿದ್ದು, ಈ ಅನುದಾನಗಳು ಕೇಂದ್ರ ಸರ್ಕಾರದ ಬಳಿಯೇ ಉಳಿಯಲಿದೆ.

15ನೇ ಹಣಕಾಸು ಆಯೋಗದಲ್ಲಿ ಕರ್ನಾಟಕದ ತೆರಿಗೆ ಹಂಚಿಕೆಯು 14ನೇ ಆಯೋಗದಲ್ಲಿದ್ದ ಶೇ.4.713 ರಿಂದ ಶೇ.3.647 ಕ್ಕೆ (ಸುಮಾರು ಶೇ.23 ರಷ್ಟು ಕುಸಿತ) ಇಳಿಕೆಯಾಗಿದೆ. ಇದರಿಂದಾಗಿ ರಾಜ್ಯಕ್ಕೆ 15ನೇ ಹಣಕಾಸು ಆಯೋಗದ 6 ವರ್ಷಗಳ ಅವಧಿಯಲ್ಲಿ (2020-21 ರಿಂದ 2025-26 ರವರೆಗೆ) ಸುಮಾರು 65,000 ಕೋಟಿ ರೂ.ಗಳಷ್ಟು ತೆರಿಗೆ ನಷ್ಟವಾಗಿರುವುದು ಕಂಡು ಬರುತ್ತದೆ.